ಅವನು ಮುಂದೆ ಮಾತನಾಡದಾದ. ಉದ್ದೇಶ ಅದೇ ಆಗಿದ್ದರೂ ಅದನ್ನು ಮುಕ್ತವಾಗಿ ತೋಡಿಕೊಳ್ಳುವ ಸ್ಥೈರ್ಯ ಯಾರಿಗೆ ತಾನೆ ಇರುತ್ತದೆ. ಕೆಲವು ಕ್ಷಣ ಅವಳೂ ಮೌನವಾದಳು. ಆ ಹೊತ್ತಿಗಾಗಲೇ ಸಂಜೆಗತ್ತಲು ಆವರಿಸಿ, ಎದುರಿಗಿನ ಪರಿಸರದಲ್ಲಿ ಬಣ್ಣದ ದೀಪಗಳು ಹೊತ್ತಿಕೊಳ್ಳತೊಡಗಿದವು. ಕಣ್ಣೆದುರಿಗೇ ಇರುವ ಗಗನ ಚುಂಬಿ ಕಟ್ಟಡದಲ್ಲಿ ಕಣ್ಣು ಕುಕ್ಕುವಂತೆ ದೀಪಗಳು ಹೊತ್ತಿಕೊಂಡು ಅವು ಭೂಮಿಗೂ ಆಕಾಶಕ್ಕೂ ನಡುವೆ ಕಟ್ಟಿರುವ ಬೆಳಕಿನ ಸೇತುವೆ ಎಂಬಂತೆ ಗೋಚರಿಸಿತು. ಕೃತಕ ಹೊಂಡದ ನೀರಿನಿಂದ ಚಿಮ್ಮಿದ ಕಾರಂಜಿಗಳು ಎತ್ತರೆತ್ತರಕ್ಕೆ ಜಿಗಿದು, ನೀರು ಆ ಪರಿಸರದಲ್ಲಿ ಮಂಜಿನಂತೆ ಚಿಮ್ಮಿ ಗಾಳಿಯಲ್ಲಿ ಸೇರುತ್ತಲಿತ್ತು. ಜನರು ಅಲ್ಲಿ ಇಲ್ಲಿ ಅಲೆಯುತ್ತ, ಕಾಫಿ, ಪಾನೀಯ ಸೇವಿಸುತ್ತ ಮೈ ಮರೆತಿದ್ದರು. ಮಾತಿಗೆ ಅಲ್ಪ ವಿರಾಮ ಕೊಟ್ಟ ಅವರು ಅದನ್ನೆಲ್ಲ ಒಂದೇಟಿಗೆ ಕಣ್ಣು ತುಂಬಿಕೊಂಡರು.

'ಯಾಕೋ ಅದೃಷ್ಟ ಒಲಿಯುವ ಲಕ್ಷಣವಿದೆ. ಹಿಡಿದರೆ ಒಂದು, ಬಿಟ್ಟರೆ ಇನ್ನೊಂದು. ಮೇದಿನಿ ತನ್ನನ್ನು ಪರೀಕ್ಷಿಸುತ್ತಿದ್ದಾಳೆ. ಯಾವುದಕ್ಕೂ ನಾನು ನನ್ನ ನಿಯಂತ್ರಣದಲ್ಲಿರಬೇಕು. ತಪ್ಪಿದರೆ ಮತ್ತೆ ಅವಳೊಂದಿಗೆ ಮಾತನಾಡುವ ಅವಕಾಶವೂ ತಪ್ಪಿ ಹೋಗಬಹುದು' ಎಂದು ಮೋಹನ ತನ್ನೊಳಗೆ ತಾನು ಜಾಗೃತನಾದ. ಮೇದಿನಿ ಆ ಹೊತ್ತು ಯಾವುದೇ ಭಾವನೆಗಳನ್ನು ಪ್ರಕಟಿಸದೇ ಇದ್ದಳು. ಕೆಲವು ಕ್ಷಣಗಳ ಬಳಿಕ–

'ಮಾತ್ನಲ್ಲಿ ಟೈಮ್ ಹೊಗಿದ್ದೆ ಗೊತ್ತಾಗಲಿಲ್ಲ. ಏಳು ಗಂಟೆಯಾಗತಾ ಬಂತು. ಹೊರಡಣ್ವಾ?' ಎಂದಳು.

'ಲೇಟಾಗಿ ಹೋದ್ರೆ ಯಜಮಾನ್ರು ಪ್ರಶ್ನೆ ಮಾಡ್ತಾರಾ?'

'ಹಾಗೇನಿಲ್ಲ. ಮಾತಾಡಿದ್ದಾಯ್ತಲ್ಲಾ ಇನ್ನೇನು ಹೊರಡಣ ಅಂತಾ.'

'ಸ್ವಲ್ಪ ಹೊತ್ತು ಇರಿ. ಕಾಫಿ ಕುಡಕೊಂಡು ಹೊರಡಣ್ವಾ?'

'ಸರಿ, ಬನ್ನಿ' ಎಂದು ಎದ್ದಳು. ಅವನೂ ಎದ್ದ. ಅಲ್ಲಿಂದ ನೀರಿನ ಹೊಂಡದ ಬಳಿಯಿದ್ದ ಕಾಫಿ ಶಾಪ್‌ನತ್ತ ಹೊರಟು ಬಂದರು. ಕಾಫಿ ಕುಡಿಯುತ್ತಿದ್ದಾಗಲೂ ಯಾಕೊ ಅವಳಿಗೂ ಮಾತನಾಡಬೇಕು ಅನಿಸಲಿಲ್ಲ. ಅವನಿಗೂ 'ಇನ್ನು ಏನು ಮಾತನಾಡಿದರೆ ಅವಳು ಯಾವ ರೀತಿ ಅರ್ಥ ಮಾಡಿಕೊಳ್ಳುತ್ತಾಳೊ' ಎಂದುಕೊಂಡು ಸುಮ್ಮನಿದ್ದ.

ಕಾಫಿ ಕುಡಿದು ಆ ಪರಿಸರದಿಂದ ನಿರ್ಗಮಿಸುತ್ತಿದ್ದಾಗ, 'ನಾನು ಯಶವಂತಪುರದಲ್ಲಿ ರೂಮ್ ಮಾಡಿದ್ದೀನಿ. ಇಲ್ಲಿಂದ ತುಂಬಾ ಹತ್ರಾನೆ. ನಿಮ್ಮನ್ನ ಮೆಟ್ರೊಗೆ ಹತ್ತಿಸಿ ನಾನು ನಡಕೊಂಡೆ ಹೋಗ್ತಿನಿ. ನೀವು ಯಲಚೇನಹಳ್ಳಿ ತಲುಪಿ ಮನೆ ಮುಟ್ಟೋದಕ್ಕೆ ಒಂದೂವರೆ ಗಂಟೆಯಾದ್ರೂ ಬೇಕಾಗತದೆ ಅಲ್ವಾ?' ಎಂದ ಮೋಹನ.

'ಹೌದು. ನೀವು ರೂಮಿಗೆ ತಾನೆ ಹೋಗೋದು.'

'ಹೌದು.'

'ಈಗ ಗಂಟೆ ಏಳೂವರೆ. ನನ್ನ ಜೊತೆ ಬನ್ನಿ, ಮನೆ ತೋರಸ್ತಿನಿ. ಊಟಾ ಮುಗಿಸಿಕೊಂಡು ವಾಪಸ್ ಬರುವಿರಂತೆ.'

'ಮೇದಿನಿ ನಾನ್... ನಾನು... ನಿಮ್ಮನೆಗೆ...'

'ಹಾಂ... ಬನ್ನಿ ಅದಕೇನಂತೆ. ಯಾಕೆ ಇಷ್ಟಾ ಇಲ್ವಾ?'

'ಹಾಗೇನಿಲ್ಲಾ ಹಾಗೇನಿಲ್ಲಾ... ನೀವು ಕರಿಯೋದು ಹೆಚ್ಚೊ ನಾನು ಬರೋದು ಹೆಚ್ಚೊ... ಆದ್ರೆ ನಿಮ್ಮ ಯಜಮಾನ್ರು?'

'ಹೋ ಅವ್ರಾ... ಇವತ್ತು ಸಂಡೆ ತಾನೆ, ಇವತ್ತು ಅವ್ರು ರಾತ್ರಿ ಲೇಟಾಗಿ ಬರ್ತಾರೆ. ಅಷ್ಟೊತ್ತಿಗೆ